**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ದಿನಾಂಕ: 08-04-2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 08-04-2022 ರಂದು ವಾರ್ಡ್ ಸಂಖ್ಯೆ:65ರ ಏಪ್ರಿಲ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಜಿ ಇಂದ್ರಕುಮಾರ್ | ನೋಡಲ್ ಅಧಿಕಾರಿ ವಾರ್ಡ್-65 ಕಾರ್ಯಪಾಲಕ ಅಭಿಯಂತರರು (ಯಲಹಂಕ) |
| 2 | ಶ್ರೀ ನವೀನ್.ಡಿ.ಬಿ (ಪ್ರಭಾರ) | ಸಹಾಯಕ ಅಭಿಯಂತರರು ವಾರ್ಡ್-65 |
| 3 | ಡಾ. ಲಾವಣ್ಯ.ಟಿ | ಆರೋಗ್ಯ ಅಧಿಕಾರಿ |
| 4 | ಶ್ರೀಮತಿ ಸುಭಾನಾ ಭಾನು | ಸಹಾಯಕ ಅಭಿಯಂತರರು ವಾರ್ಡ್-65 (BWSSB) |
| 5 | ಶ್ರೀ ಸಿದ್ದಗಂಗಯ್ಯ | ಸಹಾಯಕ ಉಪ ಆರಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) |
| 6 | ಶ್ರೀಮತಿ ರೇಣುಕಾಂಬ | ಹಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ ಅನಿಲ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ಆಂಜನೇಯ | ಕಂದಾಯ ಪರಿವೀಕ್ಷಕರು |
| 9 | ಶ್ರೀಮತಿ ಭಾಗ್ಯ.ಬಿ | ಸ್ಟಾಫ್ ನರ್ಸ್ |
| 10 | ಶ್ರೀ ಧರ್ಮರಾಜ್.ಜಿ.ನಾಯಕ್ | ಸಹಾಯಕ ಅಭಿಯಂತರರು (White topping) Major Roads |
| 11 | ಶ್ರೀ ಕೃಷ್ಣೇಗೌಡ.ಎಂ.ಸಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Major Roads west |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಧರ್ಮರಾಜ್.ಜಿ ನಾಯ್ಕ್, ಸಹಾಯಕ ಇಂಜಿನಿಯರ್ (ವೈಟ್ ಟಾಪಿಂಗ್) ರಸ್ತೆ ಮೂಲಭೂತ ಸೌಕರ್ಯ ರವರು ಸಭೆಯಲ್ಲಿ ಹಾಜರಿದ್ದು, ಸಂಪಿಗೆ ರಸ್ತೆಯಲ್ಲಿ ನಡೆಯುತ್ತಿರುವ (ವೈಟ್ ಟಾಪಿಂಗ್) ಕಾಮಗಾರಿಯನ್ನು as per approved design and drawing specifications ಪ್ರಕಾರ ಕಾಮಗಾರಿ ನಿರ್ಮಿಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

- ಆರೋಗ್ಯ ಇಲಾಖೆಯ ಶ್ರೀ ಅನಿಲ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಯಲ್ಲಿ ಹಾಜರಿದ್ದು, ಕಸ ವಿಲೇವಾರಿಯನ್ನು Dry waste ಮತ್ತು Wet waste ವಿಂಗಡನೆ ಮಾಡಲು ಸರಿಯಾಗಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ತಿಳಿಸಲಾಯಿತು.

Scanned with CamScanner

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ//ಲಾವಣ್ಯ ರವರು ಸಭೆಯಲ್ಲಿ ಹಾಜರಿದ್ದು, ಕೋವಿಡ್-19 ವ್ಯಾಕ್ಸಿನೇಶನ್ ಬಗ್ಗೆ ಸಾರ್ವಜನಿಕರು ಮಾತನಾಡಿ ಬೂಸ್ಟರ್ ಡೋಸ್‌ನ್ನು 50 ವರ್ಷ ಮೇಲ್ಪಟ್ಟವರಿಗೆ ಹಾಕಲು ಮನವಿ ಮಾಡಿದರು. ಇದಕ್ಕೆ ವೈದ್ಯಾಧಿಕಾರಿ ರವರು ವ್ಯಾಕ್ಸಿನೇಶನ್ ಸ್ಟಾಕ್ ಇಲ್ಲವೆಂದು ತಿಳಿಸಿ ಇನ್ನು ಒಂದು ವಾರದೊಳಗೆ ಬೂಸ್ಟರ್ ಡೋಸ್‌ನ್ನು ಹಾಕಲು ಕ್ರಮ ವಹಿಸುವುದು ಎಂದು ತಿಳಿಸಿದರು.

- ಬಿ.ಡಬ್ಲ್ಯು.ಎಸ್.ಎಸ್.ಬಿ ಸಹಾಯಕ ಇಂಜಿನಿಯರ್ ಸುಹಾಸಬಾನು ರವರು ಸಭೆಯಲ್ಲಿ ಹಾಜರಿದ್ದು, ಬಿ.ಡಬ್ಲ್ಯು.ಎಸ್.ಎಸ್.ಬಿ ಕಾಮಗಾರಿ ನಡೆಸುವ ಮುನ್ನ ಸಂಬಂಧಪಟ್ಟ ವಾರ್ಡ್ ಇಂಜಿನಿಯರ್ ರವರಿಗೆ ಮಾಹಿತಿ ನೀಡಿ ರಸ್ತೆ ಅಗೆಯುವ ಸಂಬಂಧ ವರದಿ ನೀಡಲು ಅಧ್ಯಕ್ಷರು ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿ ರವರಿಗೆ ತಿಳಿಸಿದರು.

- ಅರಣ್ಯ ಇಲಾಖೆ ಅಧಿಕಾರಿಯವರು ಸಭೆಗೆ ಗೈರು ಹಾಜರಾಗಿದ್ದು, ವಾರ್ಡ್-65ರ ವ್ಯಾಪ್ತಿಯ ಮರವನ್ನು ಈಗಾಗಲೇ ನೆಲ ಮಟ್ಟದವರಿಗೆ ತೆಗೆದಿದ್ದು, ಅದರ ಬುಡ ಸಮೇತ, ತೆಗೆಯಲು ಸಾರ್ವಜನಿಕರು ಕೋರಿದ್ದು ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟ ಅರಣ್ಯ ಅಧಿಕಾರಿಯವರಿಗೆ ತಿಳಿಸಿ ಸೂಕ್ತ ಕ್ರಮವಹಿಸಲು ಸೂಚಿಸಿದರು.

- ಬೀದಿ ದೀಪ ಅಧಿಕಾರಿಯವರು ಸಭೆಗೆ ಗೈರು ಹಾಜರಾಗಿದ್ದು, ಕೆಲವೊಂದು ಕಡೆ ರಸ್ತೆ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲ ಹಾಗೂ ನಿರ್ವಹಣೆಯಿಲ್ಲವೆಂದು ಸಾರ್ವಜನಿಕರು ದೂರಿದ್ದು, ಹಾಗೂ 4ನೇ ಕ್ರಾಸ್, 12ನೇ ಕ್ರಾಸ್, ಕೊದಂಡರಾಮಪುರ, ಮಲ್ಲೇಶ್ವರಂ ಇಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಕೋರಿದ್ದು ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟ ಇಲಾಖೆ ಅಧಿಕಾರಿಯವರಿಗೆ ತಿಳಿಸಿ ಸೂಕ್ತ ಕ್ರಮವಹಿಸಲು ಸೂಚಿಸಿದರು.

- ಅನಧಿಕೃತ ಬ್ಯಾನರ್‌ಗಳನ್ನು ತೆಗೆಯಬೇಕೆಂದು ಹಾಗೂ ಜೋತು ಬಿದ್ದಿರುವ ಕೇಬಲ್‌ಗಳನ್ನು ತೆರವುಗೊಳಿಸಿ ಹಾಗೂ ಇದನ್ನು ಹಾಕುವವರ ಮೇಲೆ ಕೂಡ ಕಾನೂನು ಕ್ರಮ ವಹಿಸುವುದಾಗಿ ಅಧ್ಯಕ್ಷರು ತಿಳಿಸಿದರು.

- ವಾರ್ಡ್-65ರ ವ್ಯಾಪ್ತಿಯಲ್ಲಿ ಫುಟ್‌ಪಾತ್ ಕಾಮಗಾರಿಯು ನಡೆಯುತ್ತಿದ್ದು, ಇಲ್ಲಿ ಮುಂಚೆ ಅಳವಡಿಸಿದ್ದ, Side Railings ಅನ್ನು ಇನ್ನೊಂದು ಕಡೆ ಕಾಮಗಾರಿಗೆ ಅಳವಡಿಸಿರುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Hameed
I/c AE-65
ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್-65
ಕಾಡುಮಲ್ಲೇಶ್ವರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ

Scanned with CamScanner